ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

# ನಾಲ್ಕರ ಘಟ್ಟಕ್ಕೆ ಜೈನ್ ವಿವಿ

**ಮೈಸೂರು:** ಬೆಂಗಳೂರಿನ ಜೈನ್ ವಿಶ್ವ ವಿದ್ಯಾಲಯ ಇಲ್ಲಿ ನಡೆಯುತ್ತಿರುವ ರೆಡ್‌ಬುಲ್ ರಾಷ್ಟ್ರೀಯ ಕಾಲೇಜು ಮಟ್ಟದ ಟ್ವೆಂಟಿ 20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ತಲುಪಿದೆ. ನಾಲ್ಕರ ಘಟ್ಟದಲ್ಲಿ ಬೆಂಗಳೂರು ತಂಡ ಚಂಡಿಗಢದ ಡಿಎ ಕಾಲೇಜು ತಂಡವನ್ನು ಎದುರಿಸಲಿದೆ. ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈಯ ರಿಜ್ವಿ ಕಾಲೇಜು ತಂಡ, ನವದೆಹಲಿಯ ಕಿರೋರಿಮಳ್ ಕಾಲೇಜು ತಂಡವನ್ನು ಎದುರಿಸಲಿದೆ.

ಟೂರ್ನಿಯ ಮೂರನೇ ದಿನವಾದ ಗುರುವಾರ ಗಂಗೋತ್ರಿ ಗ್ಲೆಡ್ ಮತ್ತು ಜೆಎಸ್‌ಇ ಮೈದಾನದಲ್ಲಿ ತಲಾ ಎರಡು ಪಂದ್ಯಗಳು ನಡೆದವು. ಏಕಪಕ್ಷೀಯವಾಗಿದ್ದ ಪಂದ್ಯದಲ್ಲಿ ಚಂಡಿಗಢದ ಡಿಎ ಕಾಲೇಜು, ಪುಣೆಯ ಎಂಎಂಸಿಸಿ ವಿರುದ್ಧ 100 ರನ್‌ಗಳ ಸುಲಭ ಗೆಲುವು ಪಡೆದು ಸೆಮಿಫೈನಲ್ ಪ್ರವೇಶಿಸಿತು. ದೀಪಕ್ ಶರ್ಮ 42 ಎಸೆತಗಳಲ್ಲಿ 53 ರನ್ ಬಾರಿಸಿ ಚಂಡಿಗಢ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ಮೊದಲು ಬ್ಯಾಟ್ ಮಾಡಿದ ಚಂಡಿಗಢ 8 ವಿಕೆಟ್‌ಗಳಿಗೆ 181 ರನ್ ಗಳಿಸಿದರೆ, ಪುಣೆ ತಂಡ 80 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಇನ್ನೊಂದು ಪಂದ್ಯದಲ್ಲಿ ಕೋಲ್ಕತ್ತದ ಪ್ರಫುಲ್ಲಚಂದ್ರ ಕಾಲೇಜು ತಂಡ, ಬರೋಡದ ಎಂಎಸ್‌ಯು ವಿರುದ್ಧ ಗೆದ್ದರೂ ರನ್ ಸರಾಸರಿಯಲ್ಲಿ ಹಿಂದೆ ಬಿದ್ದು ಸೆಮಿಫೈನಲ್ ಪ್ರವೇಶದಿಂದ ವಂಚಿತವಾಯಿತು. ನವದೆಹಲಿಯ ಕಿರೋರಿಮಾಳ್ ಕಾಲೇಜು ಮತ್ತು ಜಾಲಂಧರ್‌ನ ಟ್ರಿನಿಟಿ ಕಾಲೇಜುಗಳ ನಡುವೆ ತುರುಸಿನ ಪಂದ್ಯ ನಡೆಯಿತು. ಕೊನೆಯ ಎಸೆತದವರೆಗೂ ಜಯ ಅತ್ತಿತ್ತ ಹೊಯ್ದಾಡುತ್ತಿತ್ತು. ಅಂತಿಮವಾಗಿ ಒಂದು ರನ್ನಿನ ಗೆಲುವು ಪಡೆದ ಕಿರೋರಿಮಾಳ್ ಕಾಲೇಜು ನಾಲ್ಕರ ಘಟ್ಟ ಪ್ರವೇಶಿಸಿತು.

ಟಾಸ್ ಗೆದ್ದು ಬ್ಯಾಟ್ ಮಾಡಿದ ಟ್ರಿನಿಟಿ ಕಾಲೇಜು ತಲ್ವಿಂದರ್ ಸಿಂಗ್ ಅವರ ಬಿರುಸಿನ ಬ್ಯಾಟಿಂಗ್‌ನ (35 ಎಸೆತಗಳಲ್ಲಿ 61 ರನ್) ನೆರನಿಂದ 163 ರನ್‌ಗಳನ್ನು ಕಲೆ ಹಾಕಿತು.